ನಾನು ನಡುವಿನ ಮನುಷ್ಯನಾಗಿದ್ದೇನೆ. ನಮ್ಮ ಮಕ್ಕಳ ಬಣ್ಣ–ರೂಪ ಸ್ವಲ್ಪ ಭಾರತೀಯರಂತಿದೆ. ನೂರು ವರ್ಷಗಳಿಗಿಂತ ಹೆಚ್ಚಾಗಿದ್ದಾಗ್ಯೂ, ನಮ್ಮ ಮುತ್ತಜ್ಜಿಯ ಇಂಡಿಯನ್ ಜಿನೋಮ್ ನಮ್ಮ ಪ್ರತಿಯೊಂದು ಪೀಳಿಗೆಯಲ್ಲಿ, ಕೆಲವರ ತಲೆಗೂದಲುಗಳಲ್ಲಿ, ಕೆಲವರ ಕಣ್ಣುಗಳಲ್ಲಿ, ಕೆಲವರ ಚರ್ಮದಲ್ಲಿ ಪ್ರತ್ಯಕ್ಷವಾಗಿ, ತಮ್ಮ ಉಪಸ್ಥಿತಿಯನ್ನು ಸಾರುತ್ತಿವೆ. ನಮ್ಮ ನರನಾಡಿಗಳಲ್ಲಿ ಭಾರತೀಯ ರಾಜಮನೆತನದ ವ್ಯಕ್ತಿಯ ರಕ್ತ ಹರಿಯುತ್ತಿದೆ, ನಮಗೆ ಈ ಉತ್ತರಾಧಿಕಾರದ ಬಗ್ಗೆ ಹೆಮ್ಮೆಯಿದೆ.

'ಇವನು ಲೂಸಿ ಮತ್ತು ಗ್ರೇಸಿಯ ಹಾಫ್ ಬ್ರದರ್ ಅಲಾನ್.' ಹೀಗೆಂದು ಪರಿಚಯಿಸಿದಾಗ ಎಲ್ಲರೂ 'ಓಹ್!' ಎಂದು ಭ್ರಾಂತರಾಗುತ್ತಿದ್ದರು. ಅಲಾನ್‌ನ ಉಪಸ್ಥಿತಿ ನನ್ನ ಜೀವನದ ಕಳೆದು ಹೋದ ದುಃಖದ ಇತಿಹಾಸವನ್ನು ವರ್ಣಿಸುತ್ತಿತ್ತು.

ಸಹೋದರಿ ಸಹೋದರರು ಬಂದ ನಂತರ ಮನೆಯಲ್ಲಿ ಸಡಗರದ ವಾತಾವರಣ ಮೂಡಿತು. ಸಮರ್ ಹೌಸ್ ಇನ್ನಷ್ಟು ಝೇಂಕರಿಸಿತು. ನನ್ನ ಪರಿವಾರದಲ್ಲಿ ನಾನೊಬ್ಬನೇ ವಿವಾಹ ವಿಚ್ಛೇದಿತ, ಅದೂ ಎರಡು ಬಾರಿ ಎಂಬುದನ್ನು ನಾನು ಪದೇ ಪದೇ ಮನಗಾಣುತ್ತೇನೆ. ನನ್ನ ಮನಸ್ಸು ಕಳವಳಗೊಳ್ಳುತ್ತದೆ.

ನಾನು ನನ್ನ ಸಹೋದರರು ಸಹೋದರಿಯನ್ನು ಭೇಟಿಯಾದಾಗ ಅವರಿಗೆ ನನ್ನ ಭಾರತ ಯಾತ್ರೆಯ ಪ್ರಸಂಗವನ್ನು ಅವಶ್ಯವಾಗಿ ಹೇಳುತ್ತೇನೆ. ಅವರು ತುಂಬಾ ಕುತೂಹಲದಿಂದ ನನ್ನ ಭಾರತ ಯಾತ್ರೆಯ ವೃತ್ತಾಂತವನ್ನು ಕೇಳುತ್ತಾರೆ. ನಾನು ನಮ್ಮ ಮುತ್ತಜ್ಜಿಯ ದೇಶಕ್ಕೆ ಹೋಗಿ ಬಂದದ್ದು ಅವರಿಗೊಂದು ವಿಶೇಷ ಕೊಡುಗೆ ಲಭಿಸಿತು ಎಂದು ಅನ್ನಿಸುತ್ತಿತ್ತು. ನಾನು ಸಹ ಹೆಮ್ಮೆಯಿಂದ, ಬಾಯಿ ಚಪ್ಪರಿಸುತ್ತಾ ಅವರಿಗೆ ನನ್ನ ಭಾರತ ಯಾತ್ರೆಯ ಕಥೆಯನ್ನು ಹೇಳುತ್ತೇನೆ. ನಾನು ಮೊದಲ ಬಾರಿಗೆ ಭಾರತಕ್ಕೆ ನೀನಾಳೊಂದಿಗೆ ಹನಿಮೂನ್ ಆಚರಿಸಲು ಹೋಗಿದ್ದೆ, ಆಗ ಮಹಾರಾಷ್ಟ್ರ ಮತ್ತು ಕೇರಳಕ್ಕೂ ಹೋಗಿದ್ದೆ. ಎರಡನೆಯ ಬಾರಿ ನನ್ನ ಚರ್ಚಿನ ವಿಷಯದಲ್ಲಿ ಭಾರತಕ್ಕೆ ಹೋದೆ; ಆಗ ದಿಲ್ಲಿ, ಆಗ್ರಾ, ಡೆಹರಾಡೂನ್, ಮಸೂರಿ, ಹರಿದ್ವಾರ ಮತ್ತು ಋಷಿಕೇಶಕ್ಕೂ ಹೋಗಿದ್ದೆ. ಡೆಹರಾಡೂನಿನ ಮಸೂರಿ ರೋಡಿನ ಒಂದು ಬೆಟ್ಟದಲ್ಲಿ ಹೊಸದೊಂದು ಚರ್ಚ್ ನಿರ್ಮಾಣವಾಗುತ್ತಿತ್ತು. ಈಚೆಗೆ ನನ್ನ ಚರ್ಚ್ ಗಾಯಕ ಮಂಡಳಿಯ ಸದಸ್ಯನೊಬ್ಬ ಅಲ್ಲಿದ್ದ. ಅವನೇ ನನ್ನನ್ನು ಆಹ್ವಾನಿಸಿದ. ನಾನು ಆ ಚರ್ಚ್‌ನ ನಿರ್ಮಾಣಕ್ಕಾಗಿ ಎರಡು ಸಾವಿರ ಕ್ರೋನರ್ ಹಣವನ್ನು ದಾನ ಕೊಟ್ಟೆ. ಇದು ಇಂಡಿಯನ್ ಕರೆನ್ಸಿಯಲ್ಲಿ ದೊಡ್ಡ ಮೊತ್ತದ ಹಣವಾಗಿದೆ. ನಾನು ಹೊಸದಾಗಿ ನಿರ್ಮಾಣಗೊಂಡ ಚರ್ಚಿನ ಉದ್ಘಾಟನೆಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಹೋಗಿದ್ದೆ.

'ನಾನೂ ಇಂಡಿಯಾಕ್ಕೆ ಹೋಗಲು ಬಯಸುತ್ತೇನೆ' ಎಂದ ವಿಲಿಯಮ್.

'ಆದರೆ ಅಲ್ಲಿ ಎಚ್ಚರಿಕೆಯಿಂದಿರು…' ನಾನು ಅವನಿಗೆ ಎಚ್ಚರಿಕೆಯ ಮಾತನ್ನು ಹೇಳಿದೆ, 'ಅಲ್ಲಿ ಟ್ಯಾಕ್ಸಿ ಡ್ರೈವರ್, ಅಂಗಡಿಯವರು ಎಲ್ಲರೂ ವಿದೇಶಿಗರನ್ನು ಲೂಟಿ ಮಾಡುತ್ತಾರೆ. ನಾನು ನೋಡುವುದಕ್ಕೆ ಸ್ವಲ್ಪ ಇಂಡಿಯನ್ ಹಾಗೆ ಕಾಣಿಸುತ್ತೇನೆ, ಆದರೆ ಅವರು ನನ್ನ ಹಾವಭಾವವನ್ನು ನೋಡಿ, ನನ್ನನ್ನು ವಿದೇಶಿ ಎಂದು ತಿಳಿಯುತ್ತಾರೆ. ನನಗೆ ವಸ್ತುಗಳ ಬೆಲೆಯನ್ನು ಹೆಚ್ಚಾಗಿ ಹೇಳುತ್ತಿದ್ದರು.'

ಎಲ್ಲರೂ ಸಮ್ಮರ್ ಹೌಸನ್ನು ಪ್ರಶಂಸಿಸುತ್ತಿದ್ದರು. ಸೂರ್ಯ ಹೊಳೆಯುತ್ತಿದ್ದ, ಚಿಕ್ಕ ಚಿಕ್ಕ ನೌಕೆಗಳು ತೀರದಲ್ಲಿ ಮುಳುಗೇಳುತ್ತಿದ್ದವು. ಸಮುದ್ರ ತೀರಗಳಲ್ಲಿ ಅಡ್ಡಾಡುವುದು, ಸಮುದ್ರದ ತೀರದಲ್ಲಿ ಕೂತು ವಿನೋದದ ಮಾತುಗಳನ್ನಾಡುವುದು ಉತ್ಸಾಹದ ಕ್ಷಣಗಳಾಗಿದ್ದವು. ನಾವು ಮೂವರು ಸಹೋದರರು ಟಿ–ಶರ್ಟ್ ಮತ್ತು ನಿಕ್ಕರ್ ಧರಿಸಿ ಒಟ್ಟಿಗೆ ಕಲೆತು ಇಲ್ಲಿ ಎಡಿನ್‌ಬರೊ ಮತ್ತು ಪೂರ್ವ ಲೋಥಿಯನ್ ಸಮುದ್ರ ತೀರಗಳು ಮತ್ತು ರೇವು ಪಟ್ಟಣಗಳನ್ನು ಪತ್ತೆ ಹಚ್ಚುತ್ತಿದ್ದೆವು. ಸಮುದ್ರದಲ್ಲಿ ರ್‍ಯಾಫ್ಟಿಂಗ್ ಮಾಡುತ್ತಿದ್ದೆವು. ನಮ್ಮ ಬಾಲ್ಯ ಮರಳಿ ಬಂದಿದೆ ಎಂದು ಅನ್ನಿಸುತ್ತದೆ. ಒಂದು ಸಂಜೆ ನಾನು ಇಂಡಿಯನ್ ಊಟ – ವೆಜಿಟೆಬಲ್ ರೈಸ್, ಚಿಕನ್ ಕರಿ, ರಾಯತಾ ಮಾಡಿದೆವು. ಎಲ್ಲರಿಗೂ ತುಂಬಾ ಇಷ್ಟವಾಯಿತು. ನನ್ನ ಸಹೋದರರು ನೈಫ್ ಫೋರ್ಕ್ ನೆಕ್ಕಿದರು.

ವಿಲಿಯಮ್ ಮತ್ತು ಅಲ್ಬರ್ಟ್ ಎರಡು ದಿನಗಳಿದ್ದು ಹೊರಟು ಹೋದರು. ಜೂಲಿಯಾ ಮತ್ತು ಅವಳ ಮಗ ನಮ್ಮೊಂದಿಗೆ ಸಮ್ಮರ್ ಹೌಸಿನಲ್ಲಿ ಇಡೀ ಐದು ದಿನಗಳಿದ್ದರು. ಜೂಲಿಯಾ, ಲೂಸಿ ಮತ್ತು ಗ್ರೇಸಿಯರ ಪ್ರೀತಿಯ ಆಂಟಿಯಾಗಿದ್ದಾಳೆ. ನಂತರ ನಾವದೇ ನಾಲ್ಕು ಜನ… ಲೂಸಿ, ಗ್ರೇಸಿ, ಅಲಾನ್ ಮತ್ತು ನಾನು ಇಲ್ಲಿ ಇನ್ನೂ ಒಂದು ವಾರ ಉಳಿಯುವುದಿತ್ತು. ನನ್ನ ಪುತ್ರಿಯರೊಂದಿಗಿರುವುದು ನನಗೆ ಹಿತವೆನಿಸುತ್ತದೆ. ಅವರೊಂದಿಗೆ ಜೀವನದ ಕೆಲವು ಸುಂದರ ಕ್ಷಣಗಳನ್ನು ಕಳೆಯುವುದರಿಂದ ಅಪಾರ ಆನಂದ ಮತ್ತು ಸಂತುಷ್ಟಿ ಲಭಿಸುತ್ತದೆ.

ನಾವು ಸಮುದ್ರದ ಅಲೆಗಳಲ್ಲಿ ಬೋಟಿಂಗ್ ಮಾಡಿದೆವು, ಈಜಿದೆವು, ಮೀನುಗಳನ್ನು ಹಿಡಿದೆವು, ಕಪ್ಪೆಚಿಪ್ಪುಗಳನ್ನು ಹುಡುಕಿದೆವು. ಬಿದಿರಿನ ಕೋಲುಗಳಿಗೆ ಹಗ್ಗಗಳನ್ನು ಪೋಣಿಸಿ ಮರಳಿನ ಮೇಲೆ ಉಯ್ಯಾಲೆ ಕಟ್ಟಿದೆವು. ಲೂಸಿ ಮತ್ತು ಗ್ರೇಸಿ ಬೆವರು ಸುರಿಸುವ ಆಟಗಳಿಂದ ಶೀಘ್ರವೇ ಬೇಸರಗೊಂಡು ಬೇರೆ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಆದರೆ ಅಲಾನ್ ಪೂರ್ಣ ನಿಷ್ಠೆಯಿಂದ ನನ್ನೊಂದಿಗೆ ತೊಡಗಿಸಿಕೊಂಡಿರುತ್ತಿದ್ದ. ತನ್ನ ಅಭಿಪ್ರಾಯವನ್ನು ಸಹ ಹೇಳುತ್ತಿದ್ದ. ಅವನು ಬುದ್ಧಿವಂತನೆಂದು ತೋರುತ್ತಿದ್ದ. ನಾವು ಅನೇಕ ಆಟಗಳನ್ನು ಸಮುದ್ರದ ತೀರದಲ್ಲಿ ಆಡಿದೆವು. ನಾವೆಲ್ಲಾ ಬಿಸಿಲಿನಿಂದಾಗಿ ಶ್ಯಾಮಲ ವರ್ಣಕ್ಕೆ ಹೊರಳಿದ್ದೆವು.

ಆರಂಭದಲ್ಲಿ, ಇಲ್ಲಿ ನಾಲ್ಕು ವಾರಗಳು ಕಳೆಯುವುದು ಕಷ್ಟವೆಂದು ಅನ್ನಿಸುತ್ತಿತ್ತು. ಆದರೆ ಮೂರು ವಾರಗಳು ಕಳೆದ ನಂತರ ನಾಲ್ಕನೆಯ ವಾರ ಎಷ್ಟು ಬೇಗನೆ ಕಳೆದು ಹೋಯಿತು ಎಂಬುದು ತಿಳಿಯಲೇ ಇಲ್ಲ. ನಾವು ಮರುದಿನ ಎಡಿನ್‌ಬರೊಗೆ ಮರಳಿ ಹೋಗುತ್ತಿದ್ದೆವು. ಸಂಜೆಯ ವೇಳೆಯಾಗಿತ್ತು. ನಾವು ಸಮರ್ ಹೌಸಿನ ಲಾನ್‌ನಲ್ಲಿ ಕೂತು ವಿಶ್ರಾಂತಿ ಪಡೆಯುತ್ತಿದ್ದೆವು, ಎದುರಿಗೆ ಸಾಗರವಿತ್ತು. ಮಧ್ಯಾಹ್ನದ ವೇಳೆಯಲ್ಲಿ ನಾವು ಸಮುದ್ರ ತೀರದಲ್ಲಿ ನಿಂತ ಬಂಡೆಗಳ ಮೇಲೆ ಒಂದು ದೀರ್ಘ ಹೈಕಿಂಗ್ ಮಾಡಿದ್ದರಿಂದ ದಣಿದಿದ್ದೆವು.

ನಾವು ಕುರ್ಚಿಯಲ್ಲಿ ಕೂತು ಕೋಕ್ ಕುಡಿಯುತ್ತಿದ್ದೆವು, ಚಿಪ್ಸ್ ತಿನ್ನುತ್ತಿದ್ದೆವು. ಮೂರು ಮಕ್ಕಳೊಂದಿಗೆ ಸಮರ್ ಹೌಸ್‌ನಲ್ಲಿ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿಕೊಂಡಿರುವುದು ಸುಲಭದ ಕೆಲಸವಾಗಿರಲಿಲ್ಲ. ಅದಕ್ಕೆ ಸಾಕಷ್ಟು ಶ್ರಮವಹಿಸಬೇಕಿತ್ತು, ಲೂಸಿ ಮತ್ತು ಗ್ರೇಸಿಯಿಂದ ದೂರವಿರುವುದು ದುಃಖದ ಸಂಗತಿಯಾಗಿತ್ತು; ಅಲ್ಲದೆ ನಾವು ಸಮ್ಮರ್ ಹೌಸಿನಿಂದ ಮರಳಿ ಹೋಗುವ ಸಮಯವೂ ಸಮೀಪಿಸುತ್ತಿತ್ತು. ನಾನು ಮತ್ತೆ ಶೀಘ್ರವೇ ಸ್ವತಂತ್ರ ಪಕ್ಷಿಯಾಗುತ್ತೇನೆ.

ಸ್ವಲ್ಪ ಹೊತ್ತಿನ ನಂತರ ಒಂದು ಕಾರು ನಮ್ಮ ಸಮ್ಮರ್ ಹೌಸಿನೆದುರು ಬಂದು ನಿಂತಿತು. ಸಮ್ಮರ್ ಹೌಸಿನ ಕೇರ್ ಟೇಕರ್ ನಿಕೋ ಕಾರಿನಿಂದ ಇಳಿದ.

'ಗುಡ್ ಈವನಿಂಗ್ ಸಾರ್!'

'ಎ ವೆರಿ ಗುಡ್ ಈವಿನಿಂಗ್!' ಎದ್ದು ಹೋಗಿ ಅವನ ಕೈಕುಲುಕಿದೆ.

'ಹೇಗಿದ್ದೀರಿ ಸಾರ್?'

'ಚೆನ್ನಾಗಿದ್ದೇನೆ. ಸಮರ್ ಹೌಸ್ ಹೊಸತನವನ್ನು ಮೂಡಿಸಿತು.'

'ನಾಳೆ ಮರಳಿ ಹೋಗುತ್ತಿದ್ದೀರ?'

'ಹೌದು, ಈ ತೀರದಲ್ಲಿ ತುಂಬಾ ವಿಶ್ರಾಂತಿಯನ್ನು ಅನುಭವಿಸಿದೆವು, ಇನ್ನು ಮರಳಿ ನಮ್ಮ ನಮ್ಮ ಕೆಲಸಕ್ಕೆ ಹೋಗ್ತೀವಿ, ಇಲ್ಲದಿದ್ದರೆ ಜೀವನ ಸಾಗಬೇಕಲ್ಲ' ನಾನು ನಕ್ಕೆ.

'ನಾನೂ ಸಹ ಇಲ್ಲಿ ಜೀವನ ನಿರ್ವಹಣೆಗಾಗಿ ಬಂದಿದ್ದೇನೆ. ಬಲ್ರಾ ಸಾರ್?'

'ಎಸ್' ನಾನು ಕೈಯಾಡಿಸಿದೆ.

ನಿಕೋ ಮೆಲ್ಲನೆ ಮುಗುಳ್ನಗುತ್ತಾ ಸಮರ್ ಹೌಸಿನೊಳಗೆ ಹೋದ, ಒಳಗೆ ಹೊರಗೆ ಸುತ್ತಾಡಿ, ನಾವೇನಾದರೂ ಹಾನಿಯನ್ನು ಮಾಡಿದ್ದೇವೆಯೇ ಎಂಬುದನ್ನು ಪರೀಕ್ಷಿಸಿದ.

ಎಲ್ಲವನ್ನೂ ನಿರೀಕ್ಷಿಸಿದ ನಂತರ ನಿಕೋ ಕೇಳಿದ, 'ಇಲ್ಲಿರುವುದು ಹೇಗೆನ್ನಿಸಿತು?'

'ತುಂಬಾ ಚೆನ್ನಾಗಿದೆ!'

'ನಿಮ್ಮ ಮಕ್ಕಳಿಗೆ?' ಅವನು ಲೂಸಿ, ಗ್ರೇಸಿ ಮತ್ತು ಅಲಾನನ್ನು ನೋಡುತ್ತಾ ಕೇಳಿದ.

'ತುಂಬಾ ಇಷ್ಟವಾಯ್ತು,' ಲೂಸಿ ಮತ್ತು ಗ್ರೇಸಿ ಹೇಳಿದರು.

'ನಾವಿಲ್ಲಿಗೆ ಮತ್ತೆ ಬರ್ತೀವಿ' ಎಂದ ಅಲಾನ್.

'ಯೂ ಆರ್ ಆಲ್ವೇಸ್ ವೆಲ್‌ಕಮ್, ಯಂಗ್ ಮ್ಯಾನ್' ಎಂದ ನಿಕೋ.

ನಂತರ ಅವನು ಒಂದು ಫಾರ್ಮನ್ನು ನನ್ನೆಡೆಗೆ ಚಾಚುತ್ತಾ ಹೇಳಿದ, 'ನಿಮಗೆ ತೊಂದರೆಯಾಗದಿದ್ದರೆ, ಈ 'ಫೀಡ್‌ಬ್ಯಾಕ್ ಫಾರ್ಮ್' ತುಂಬಿಸಿ. ನಾವು ನಮ್ಮ ಸಮ್ಮರ್